**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಚಿಕ್ಕನಾಯಕನಹಳ್ಳಿ**

**ಸಿ.ಸಿ. ನಂ.542/2024**

**ಸಿ ಡಬ್ಲ್ಯೂಃ 16**

**ಪಿ ಡಬ್ಲ್ಯೂಃ 12**

| | | |
|---|---|---|
| ಹೆಸರು | : | ರವೀಂದ್ರ ಕೆ |
| ತಂದೆಯ ಹೆಸರು | : | ಲೇಟ್ ಕೆಂಚಪ್ಪ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ನಿವೃತ್ತ ಪಿ ಎಸ್ ಐ |
| ವಾಸಸ್ಥಳ | : | ತಿಪಟೂರು |

**ದಿನಾಂಕಃ 25-07-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದಃ**

ನಾನು ದಿಃ 29.12.2021 ರಿಂದ 31.05.2025 ರವರೆಗೆ ಹಂದನಕೆರೆ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 20.08.2024 ರಂದು ಚಾಸಾ-15 ರವರಿಂದ ಈ ಪ್ರಕಣದ ಕಡತವನ್ನು ಪಡೆದು ಗಾಯಾಳು ಆದ ಚಾಸಾ-2 ರಿಂದ 5 ರವರ ಗಾಯದ ಪ್ರಮಾಣ ಪತ್ರವನ್ನು ಚಿಕ್ಕನಾಯಕನಹಳ್ಳಿ ಸರ್ಕಾರಿ ಆಸ್ಪತ್ರೆಯಿಂದ ಪಡೆದು ಅಪಘಾತ ಪಡಿಸಿದ ಟ್ರಾಕ್ಟರ್ ಪೋಟೊ, ಮಹಜರ್ ಸಮಯದಲ್ಲಿ ತೆಗೆದ ಪೋಟೊ ಮತ್ತು ಸಿಡಿಯನ್ನು ಕಡತಕಕ್ಕೆ ಅಳವಡಿಸಿಕೊಂಡು ತನಿಖೆ ಮುಗಿದಿದ್ದರಿಂದ ಆರೋಪಿ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ. ಗಾಯದ ಪ್ರಮಾಣ ಪತ್ರವನ್ನು ನಿಪಿ11 ರಿಂದ 14 ಎಂದು, ಸಾಕ್ಷಿಯ ಸಹಿಯನ್ನು ನಿಪಿ.11(ಎ) ರಿಂದ 14(ಎ) ಎಂದು ಗುರುತಿಸಲಾಯಿತು. ಪೋಟೊ ಮತ್ತು ಸಿಡಿಯನ್ನು ನಿಪಿ.3, 5 ರಿಂದ 7 ಎಂದು ಗುರುತಿಲಾಗಿದೆ.

**<u>ಪಾಟೀಸವಾಲುಃ ಶ್ರೀ ಟಿ ಆರ್ ಕೆ ವಕೀಲರಿಂದಃ ಆರೋಪಿ ಪರವಾಗಿಃ</u>**

ನಾನು ಯಾವುದೇ ಗಾಯದ ಪ್ರಮಾಣದ ಪತ್ರವನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ವಿರುದ್ದ ಆರೋಪ ಸಾಬೀತಾಗದಿದ್ದರು ಸುಳ್ಳು ದೋಷರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಗಾಯದ ಪ್ರಮಾಣ ಪತ್ರ ಪಡೆದ ದಿಃ 21.08.2024 ಎಂದು ಕಣ್ಣು ತಪ್ಪಿನಿಂದ ತಪ್ಪಾಗಿರುತ್ತದೆ.

**<u>ಮರು ವಿಚಾರಣೆಃ</u>** ಇರುವುದಿಲ್ಲ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**.)

ಓ.ಹೇ.ಕೆ.ಸರಿ ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ,
ಚಿಕ್ಕನಾಯಕನಹಳ್ಳಿ.